7 ಉತ್ತರ ಕನ್ನಡ ಜಿಲ್ಲಾಪಂಚಾಯತ್‌ನ 2004–05ನೇ ಸಾಲಿನ ಲೆಕ್ಕಪತ್ರ ಹಾಗೂ ಲೆಕ್ಕಪರಿಶೋಧನಾ ವರದಿಗಳನ್ನು ಮಂಡಿಸುವುದು

ಶ್ರೀ ಎಂ ಪಿ ಪ್ರಕಾಶ್–ಶ್ರೀ ಕಟ್ಟಾಸುಬ್ರಮಣ್ಯ ನಾಯ್ಡು (ಭಾರಿ ಮತ್ತು ಮಧ್ಯಮ ಕೈಗಾರಿಕಾ ಸಚಿವರು)ಅವರ ಪರವಾಗಿ

1956ರ ಕಂಪನಿ ಅಧಿನಿಯಮ 619(ಎ) ಪ್ರಕರಣದ ಮೇರೆಗೆ

1 ಕರ್ನಾಟಕ ಸೋಪ್ಸ್ ಅಂಡ್ ಡಿಟೆರ್ಜೆಂಟ್ಸ್, ಲಿಮಿಟೆಡ್‌ನ 2005–06ನೇ ಸಾಲಿನ ವಾರ್ಷಿಕ ವರದಿ ಹಾಗೂ ಲೆಕ್ಕಪರಿಶೋಧನಾ ವರದಿಯನ್ನು ಮಂಡಿಸುತ್ತೇನೆ

ಶ್ರೀ ನಾಗರಾಜಶೆಟ್ಟಿ(ಮೀನುಗಾರಿಕೆ ಮತ್ತು ಮುಜರಾಯಿ ಸಚಿವರು) ಅವರು

1956ರ ಕಂಪನಿ ಅಧಿನಿಯಮ 619(ಎ) ಪ್ರಕರಣದ ಮೇರೆಗೆ

1 ಕರ್ನಾಟಕ ಮೀನುಗಾರಿಕಾ ಅಭಿವೃದ್ಧಿ ನಿಗಮ ನಿಯಮಿತದ 2005–06ನೇ ಸಾಲಿನ 36ನೇ ವಾರ್ಷಿಕ ವರದಿ ಹಾಗೂ ಲೆಕ್ಕಪರಿಶೋಧನಾ ವರದಿಯನ್ನು ಮಂಡಿಸುತ್ತೇನೆ

ಶ್ರೀ ಎಂ ಪಿ ಪ್ರಕಾಶ್–ಶ್ರೀ ಶಿವಾನಂದ ಎಸ್ ನಾಯಕ (ಸಣ್ಣಕೈಗಾರಿಕಾ ಸಚಿವರು)ಅವರ ಪರವಾಗಿ

1956ರ ಕಂಪನಿ ಅಧಿನಿಯಮ 619(ಎ) ಪ್ರಕರಣದ ಮೇರೆಗೆ

1 ಕರ್ನಾಟಕ ರಾಜ್ಯ ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿಯ 2005–06ನೇ ವಾರ್ಷಿಕ ವರದಿ ಮತ್ತು ಲೆಕ್ಕಪರಿಶೋಧನಾ ವರದಿಯನ್ನು ಮಂಡಿಸುತ್ತೇನೆ

3 ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು

ವಿಷಯ (ಅ) ಕಾವೇರಿ ವಿವಾದದ ಬಗ್ಗೆ ಮಾತುಕತೆ

ಶ್ರೀ ವಾಟಾಳ್ ನಾಗರಾಜ್(ಚಾಮರಾಜನಗರ) ಮಾನ್ಯ ಅಧ್ಯಕ್ಷರೆ, ಕಾವೇರಿ ನ್ಯಾಯಾಧಿಕರಣದ ಪರವಾಗಿ ಮಾತುಕತೆಗೆ ತಮಿಳುನಾಡಿನ ಮುಖ್ಯಮಂತ್ರಿಗಳು ಒಲವನ್ನು ತೋರಿಸಿದ್ದಾರೆಂದು ಮಾನ್ಯ ಮುಖ್ಯಮಂತ್ರಿಗಳು ಹೊರಗಡೆ ಹೇಳಿಕೆ ಕೊಟ್ಟಿರುವುದು ಪತ್ರಿಕೆಗಳಲ್ಲಿ ಬಂದಿದೆ ಮತ್ತೆ ಇವತ್ತಿನ ಸಂಜೆ ಪತ್ರಿಕೆಯಲ್ಲಿ ನಾವು ಆ ಒಲವನ್ನು ತೋರಿಸಿಲ್ಲವೆಂದು ಅಲ್ಲಿ ತಮಿಳುನಾಡಿನ ಮುಖ್ಯಮಂತ್ರಿಗಳಾದಂಥ ಶ್ರೀಮಾನ್ ಕರುಣಾನಿಧಿಯವರು ಹೇಳಿದ್ದಾರೆ ಇದು ಯಾವ ರೀತಿ ಎಂದು ಮಾನ್ಯ ಕುಮಾರಸ್ವಾಮಿಯವರು ಈ ಸದನದಲ್ಲಿ ಹೇಳಬೇಕು ಮಾತುಕತೆ ಮೂಲಕ ಎಂದು ಯುಗಾದಿ ಹಬ್ಬದ ದಿನದಂದು ತಮಿಳುನಾಡಿನ ಮುಖ್ಯಮಂತ್ರಿಯವರಿಗೆ ಶುಭಾಷಯವನ್ನು ಕೋರುವಾಗ ಮಾತನಾಡಿದ್ದೇವೆ, ಅದಕ್ಕೆ ಅವರು ಒಲವು ತೋರಿಸಿದ್ದಾರೆಂದು ನಮ್ಮ ಮುಖ್ಯಮಂತ್ರಿಯವರು ಹೊರಗಡೆ ಹೇಳಿದ್ದಾರೆ ಅದಕ್ಕೆ ತದ್ವಿರುದ್ಧವಾಗಿ ತಮಿಳುನಾಡಿನಿಂದ ಮಾತು ಬಂದಿದೆ 'ಮಾತುಕತೆಗಳ ಮೂಲಕ ಸಮಸ್ಯೆ ಬಗೆಹರಿಯುವುದಾದರೆ ನಾವು ಸಂಪೂರ್ಣವಾಗಿ ಸಂತೋಷಪಡುತ್ತೇವೆ ಸ್ವಾಗತ ಮಾಡುತ್ತೇವೆ' ಆದ್ದರಿಂದ, ಮಾನ್ಯ ಮುಖ್ಯಮಂತ್ರಿಗಳು ಈ ಬಗ್ಗೆ ಏನಾಗಿದೆ

ಎನ್ನುವ ಸ್ಪಷ್ಟವಾದ ನಿರ್ಧಾರವನ್ನು, ನಿಲುವನ್ನು ತಿಳಿಸಬೇಕೆಂದು ಕಳಕಳಿಯಿಂದ ಮನವಿ ಮಾಡಿಕೊಳ್ಳುತ್ತೇನೆ ಹಾಗೆಯೇ, ಲೋಕಸಭೆಯಲ್ಲಿ ನಿನ್ನೆಯ ದಿವಸ ನಮ್ಮ ಲೋಕಸಭಾ ಸದಸ್ಯರು ಎದ್ದು ಮಾತನಾಡುವುದಕ್ಕೆ ಪ್ರಾರಂಭಿಸಿದಾಗ ತಮಿಳುನಾಡಿನ ಇಡೀ ಲೋಕಸಭಾ ಸದಸ್ಯರು ನಮ್ಮ ಲೋಕಸಭಾ ಸದಸ್ಯರ ಮೇಲೆ ದಾಳಿ ಮಾಡಿ ನಮ್ಮ ಸದಸ್ಯರು ಮಾತನಾಡದ ರೀತಿ ತಡೆಯೊಡ್ಡಿದ್ದಾರೆ ಅದರ ಬಗ್ಗೆ ನಾನು ಇಲ್ಲಿ ಚರ್ಚೆ ಮಾಡುವುದಿಲ್ಲ ಆದರೂ, ಇವತ್ತು ಮಾತುಕತೆಯ ಬಗ್ಗೆ ಏನು ಎಂದು ನಮ್ಮ ಸದನಕ್ಕೆ ತಿಳಿಸಬೇಕು ಅವರು ಕರೆದಲ್ಲಿ ನೀವು ಮಾತುಕತೆಗೆ ಹೋಗುವುದಾದರೆ ನಿಜಕ್ಕೂ ಸಂತೋಷ ತಾವು ದಯವಿಟ್ಟು ಈ ಬಗ್ಗೆ ಹೇಳಬೇಕೆಂದು ತಮ್ಮಲ್ಲಿ ಕಳಕಳಿಯಿಂದ ಮನವಿ ಮಾಡಿಕೊಳ್ಳುತ್ತೇನೆ

ಶ್ರೀ ಹೆಚ್ ಡಿ ಕುಮಾರಸ್ವಾಮಿ(ಮಾನ್ಯ ಮುಖ್ಯಮಂತ್ರಿ) ಮಾನ್ಯ ಅಧ್ಯಕ್ಷರೆ, ನಿನ್ನೆ ತಮಿಳುನಾಡಿನ ಮುಖ್ಯಮಂತ್ರಿಗಳು ಕೆಲವು ಮಾಧ್ಯಮಗಳ ಮುಖಾಂತರ ಕಾವೇರಿಯ ವಿಷಯದಲ್ಲಿ ಮಾತುಕತೆಗಳಿಗೂ ನಾವು ಸಿದ್ಧರಿದ್ದೇವೆನ್ನುವ ಎನ್ನುವ ಕೆಲವು ವರದಿಗಳಿತ್ತು ಅದರ ಆಧಾರದ ಮೇಲೆಯೇ ನಾನು ತಮಿಳುನಾಡಿನ ಮುಖ್ಯಮಂತ್ರಿಗಳ ಜೊತೆಯಲ್ಲಿ ಪ್ರಸ್ತಾಪ ಮಾಡಿದ್ದೇನೆ ಅವರು ಆ ವಿಷಯದಲ್ಲಿ ಬೇಟಿ ಮಾಡತಕ್ಕಂಧದ್ದಕ್ಕೆ ನನಗೆ ಸಕರಾತ್ಮಕವಾಗಿ ಸ್ಪಂದಿಸಿದ್ದರು ಆದರೆ, ಇವತ್ತು ಅವರ ಹೇಳಿಕೆ ಬಂದಿರತಕ್ಕಂಧದ್ದನ್ನು ಸಹ ಗಮನಿಸಿದ್ದೇನೆ ಈ ವಿಷಯ ನನ್ನ ಗಮನಕ್ಕೆ ಬಂದಿದೆ ಇದು ಮಾತುಕತೆಗಳ ಮುಖಾಂತರ ಪ್ರಯತ್ನಪಡುವುದರ ಜೊತೆಗೆ ಈಗಾಗಲೇ ನಾವೇನು ತೀರ್ಮಾನ ಮಾಡಿದ್ದೇವೆ, ಕಾನೂನು ಪ್ರಕಾರ ನಾವೇನು ಹೋಗಬೇಕಾಗುತ್ತದೆ, ಅದರ ಬಗ್ಗೆ ನಾನು ಈಗಾಗಲೇ ನಿನ್ನೆ ಹೇಳಿಕೆ ಕೊಡಬೇಕಾದರೆ ನಾವು ಕಾನೂನಿನ ವ್ಯಾಪ್ತಿಯಲ್ಲಿ ಹೋರಾಟ ಮಾಡತಕ್ಕಂಧದ್ದು ಒಂದು ಕಡೆ, ಮಾತುಕತೆ ಮುಖಾಂತರವೂ ಇದನ್ನು ಬಗೆಹರಿಸಿಕೊಳ್ಳತಕ್ಕಂಧದ್ದಕ್ಕೆ ಪ್ರಯತ್ನ ಪಡುತ್ತೇನೆ ಎನ್ನುವ ವಿಷಯವನ್ನು ಪ್ರಸ್ತಾಪ ಮಾಡಿದ್ದೇನೆ, ಇದರಲ್ಲಿ ಮಾತುಕತೆ ಮುಖಾಂತರ ಪಕ್ಕದ ರಾಜ್ಯದವರಾದ ಅವರು ಮಾತನಾಡಲಿಕ್ಕೆ ಸಿದ್ಧವಿದ್ದಾಗ, ಆ ವಿಷಯವನ್ನು ಮುಂದಿನ ದಿನಗಳಲ್ಲಿ ಎಲ್ಲ ಸರ್ವ ಪಕ್ಷಗಳ ಮುಖಂಡರ ಜೊತೆಯಲ್ಲಿ ಚರ್ಚೆ ಮಾಡಿ ನಂತರವೇ ನಾನು ಮುಂದೆ ನಿರ್ಧಾರ ಮಾಡುತ್ತೇನೆ ಎನ್ನುವ ಮಾತನ್ನೇನು ಹೇಳಿದ್ದೇನೆ, ಅದನ್ನು ಸದನದ ಗಮನಕ್ಕೆ ತರಲಿಕ್ಕೆ ಬಯಸುತ್ತೇನೆ

ಶ್ರೀ ವಾಟಾಳ್ ನಾಗರಾಜ್· ಮಾತುಕತೆ ವಿಫಲವೇ? ಮಾತುಕತೆ ಆಗುವುದಿಲ್ಲವೇ? ನಾನು ತಮ್ಮಲ್ಲಿ ಬಹಳ ಸ್ಪಷ್ಟವಾಗಿ ಕೇಳುತ್ತಿದ್ದೇನೆ ನೀವು ಮಾತುಕತೆ ಬಗ್ಗೆ ಆಶಾವಾದ ವ್ಯಕ್ತಪಡಿಸಿದಿರಿ ಎಲ್ಲೋ ಒಂದು ಕಡೆ ಒಂದು ಹೊಸ ಅಧ್ಯಾಯ ಆರಂಭವಾಗಿದೆಯೆಂದು ನಮಗೆ ಸಂತೋಷವಾಗಿದೆ ಆದರೆ, ಈಗ ಅವರ ಮಾತಿನ ಪ್ರಕಾರ ಈ ಮಾತುಕತೆ ಇನ್ನಿಲ್ಲವೆಂತಲೋ ಅಥವಾ ಮುರಿದು ಬಿತ್ತು ಎನ್ನುವ

ಭಾವನೆ ತಮ್ಮಲ್ಲಿದೆಯೇ? ಅಥವಾ ಅವರು ಏನೇ ಹೇಳಿದರೂ ಅವರನ್ನು ತಾವು ಭೇಟಿ ಮಾಡುತ್ತೀರಾ? ದಯವಿಟ್ಟು ಈ ಬಗ್ಗೆ ಹೇಳಬೇಕು

ಶ್ರೀ ಎನ್ ಧರ್ಮಸಿಂಗ್ (ವಿರೋಧ ಪಕ್ಷದ ನಾಯಕರು) ಮಾನ್ಯ ಅಧ್ಯಕ್ಷರೆ, ನಿನ್ನೆಯ ದಿವಸ ಯುಗಾದಿ ಹಬ್ಬದ ಶುಭಾಷಯವನ್ನು ಹೇಳುವುದಕ್ಕೆ ಮಾನ್ಯ ಮುಖ್ಯಮಂತ್ರಿಗಳು phone ಮೂಲಕ ಅವರಿಗೆ ಮಾತನಾಡಿದರು ಇದು ರಾಜ್ಯದ ಅಳಿವು ಉಳಿವಿನ ಪ್ರಶ್ನೆಯಾಗಿದೆ ಈ ರೀತಿಯಾಗಿ ಹಗುರವಾಗಿ 'ದೂರವಾಣಿ ಮುಖಾಂತರ ಮಾತನಾಡಿದ್ದೇನೆ', ಎಂದು ಹೇಳುವುದು ಸರಿಯಲ್ಲ ಒಂದು ವೇಳೆ ನಮ್ಮ ಮುಖ್ಯಮಂತ್ರಿಗಳು ತಮಿಳುನಾಡಿನ ಮುಖ್ಯಮಂತ್ರಿಗಳನ್ನು ಭೇಟಿಯಾಗುವುದಿದ್ದರೆ, ಆ ಬಗ್ಗೆ ತಮಗೇನಾದರೂ clue ಸಿಕ್ಕಿದ್ದರೆ, ಅದಕ್ಕೆ ಮುಂಚಿತವಾಗಿ ರಾಜ್ಯದ ಎಲ್ಲ ನಾಯಕರನ್ನು ಸೇರಿಸಿ ಏನು ಮಾತನಾಡಬೇಕು ಎಂದು ಸಲಹೆಗಳನ್ನು ಪಡೆದುಕೊಳ್ಳಬೇಕು ಏಕೆಂದರೆ, ಲೋಕಸಭೆಯಲ್ಲಿ, ಬೇರೆ ಕಡೆಯಲ್ಲಿ ಕೂಡ Speaker ರವರು ಹೇಳಿದರೂ ಕೂಡ ಅಲ್ಲಿ ಸ್ವಲ್ಪ ತೊಂದರೆ ಇದೆ This is an emotion issue ನೀವು ಬಹಳ ಹಗುರವಾಗಿ ಮಾತನಾಡತಕ್ಕಂಥದ್ದು ಸರಿಹೋಗುವುದಿಲ್ಲ You have got the responsibility ಮಾತನಾಡಬೇಕಾದರೆ, ಹೀಗೆಲ್ಲ ನಾನು ಕರುಣಾನಿಧಿಯವರ ಜೊತೆ ಮಾಡನಾಡುವುದಕ್ಕೆ ಹೋಗುತ್ತಿದ್ದೇನೆ ಎನ್ನುವುದು ತಪ್ಪೆನಲ್ಲ ಮಾತಿನ ಮೂಲಕ ಇತ್ಯರ್ಥವಾಗುವುದಿದ್ದರೆ We will be the happiest persons ಆದರೆ, before that you have take into confidence all the people ನಮಗೆ apprise ಮಾಡಿ, ಅದರ ಬಗ್ಗೆ ಮುಂದೆ ಹೆಜ್ಜೆ ಇಡಿ

ಶ್ರೀ ಹೆಚ್ ಡಿ ಕುಮಾರಸ್ವಾಮಿ ಮಾನ್ಯ ಅಧ್ಯಕ್ಷರೆ, ನಾನು ಈ ವಿಷಯದಲ್ಲಿ ಹಗುರವಾಗಿ ತೆಗೆದುಕೊಂಡಿದ್ದೇನೆಂದು ಯಾರೂ ಸಹ ಭಾವಿಸಬೇಕಾದ ಅವಶ್ಯಕತೆಯಿಲ್ಲ ನಾನು ನಿನ್ನೆ ಬಹಳ ಸ್ಪಷ್ಟವಾಗಿ ಹೇಳಿದ್ದೇನೆ ಈ ವಿಷಯದಲ್ಲಿ ನಾನು ಸರ್ವ ಪಕ್ಷಗಳ ನಾಯಕರುಗಳ ಜೊತೆ ಚರ್ಚೆ ಮಾಡಿ, ನೀರಾವರಿ ತಜ್ಞರು ಮತ್ತು ಕಾನೂನು ತಜ್ಞರು ಜೊತೆ ಸಹ ಚರ್ಚೆ ಮಾಡಿ, ಈ ಒಂದು ವೇದಿಕೆ ಸಿದ್ಧ ಆದಂಥ ಸಂದರ್ಭದಲ್ಲಿ ಎಲ್ಲರ ವಿಶ್ವಾಸದ ಮುಖಾಂತರವೇ ನಾನು ಹೆಜ್ಜೆಯನ್ನಿಡುತ್ತೇನೆ ಎನ್ನುವ ಮಾತನ್ನು ಹೇಳುತ್ತಿದ್ದೇನೆ, ಇದರಲ್ಲಿ ನಾನು ಹಗುರವಾಗಿ ಮಾತನಾಡುವ ಪ್ರಶ್ನೆ ಇಲ್ಲ ಈ ವಿಷಯದಲ್ಲಿ ಯಾವುದೇ ಒಂದು ಮುಂದಿನ ಹೆಜ್ಜೆ ಇಡತಕ್ಕಂಥ ಸಂದರ್ಭದಲ್ಲಿ ಎಲ್ಲರನ್ನು ವಿಶ್ವಾಸಕ್ಕೆ ತೆಗೆದುಕೊಂಡು, ರಾಜ್ಯದ ಜನರ ವಿಶ್ವಾಸವನ್ನು ಪಡೆದುಕೊಂಡೇ ರಾಜ್ಯದ ಪ್ರಮುಖ ಹೋರಾಟ ಮಾಡುತ್ತಿರತಕ್ಕಂಥವರೆಲ್ಲರ ಸಲಹೆಯನ್ನು ಪಡೆದೇ ಮುಂದಿನ ಹೆಜ್ಜೆಯನ್ನಿಡುತ್ತೇನೆಂದು ತಮ್ಮ ಮೂಲಕ ಹೇಳಬಯಸುತ್ತೇನೆ

ಶ್ರೀ ವಾಟಾಳ್ ನಾಗರಾಜ್ ಅವರು ಏನೇ ಹೇಳಿದರೂ ಸಹ ತಾವು ಅವರನ್ನು ಭೇಟಿ ಮಾಡುತ್ತೀರಾ ಎನ್ನುವುದು ನನ್ನ ಪ್ರಶ್ನೆಯಾಗಿದೆ

ಶ್ರೀ ಹೆಚ್ ಡಿ ಕುಮಾರಸ್ವಾಮಿ ಈ ವಿಷಯದಲ್ಲಿ ರಾಜ್ಯಕ್ಕೆ ಒಳ್ಳೆಯದಾಗತಕ್ಕಂಥ ದೃಷ್ಟಿಯಿಂದ ಸರ್ವ ಪ್ರಯತ್ನಗಳನ್ನು ಮಾಡತಕ್ಕಂಥದ್ದಕ್ಕೆ ನಾನು ಅವರಲ್ಲಿ ಏನು ಕೆಲವು ಹಿರಿಯರಿದ್ದಾರೆ, ಅವರಿಗೆ ಮನವಿ ಮಾಡಿದ್ದೇನೆ, ಈ ವಿಷಯದಲ್ಲಿ ನಾನು ಎಲ್ಲಾ ರೀತಿಯ ಪ್ರಯತ್ನವನ್ನು ಮಾಡುವುದಕ್ಕೆ ಗಮನ ಹರಿಸಿದ್ದೇನೆಂಬುದನ್ನು ಸದಸ್ಯರ ಗಮನಕ್ಕೆ ತರಲಿಕ್ಕೆ ಬಯಸುತ್ತೇನೆ

ವಿಷಯ ಬರಪರಿಹಾರ ಕಾಯದಲ್ಲಿ ಜೆಸಿಬಿ ಯಂತ್ರಗಳನ್ನು ಉಪಯೋಗಿಸಿರುವುದರ ಬಗ್ಗೆ

ಶ್ರೀ ಜೆ ಸಿ ಮಾಧುಸ್ವಾಮಿ (ಚಿಕ್ಕ ನಾಯಕನ ಹಳ್ಳಿ) ಅಧ್ಯಕ್ಷರೇ, Scracity ಕೆಲಸ ಮಾಡಬೇಕಾದರೆ machine use ಮಾಡುತ್ತೀರಿ ಎಂದು ಹೇಳಿ ನಮಗೆಲ್ಲ ಬರೆ ಹಾಕಿಬಿಟ್ಟು, ನಮ್ಮಲ್ಲಿ Engineers strike ಮಾಡಿ ನಾವು scracity ಕೆಲಸ ಮಾಡುವುದಿಲ್ಲ, ward side ನಲ್ಲಿ ಕೆಲಸ ಮಾಡುವುದಕ್ಕೆ ಆಗುತ್ತಿಲ್ಲವೆನ್ನುತ್ತಿದ್ದಾರೆ ನಮ್ಮ ಕಡೆ ಒರಟು ಭೂಮಿ ಇದೆ ಆಳುಗಳು ಸಿಗುತ್ತಿಲ್ಲ ಈ works ಎಲ್ಲ standstill ಆಗಿಬಿಟ್ಟಿದೆ ನಾವು ಇಲ್ಲಿ ಅನೇಕ ಸಲ ಪ್ರಸ್ತಾಪ ಮಾಡಿದ್ದೇವೆ ಮೇಲ್ಗಡೆ ನಾವೇನಾದರೂ JCB ನಿಂದ ಭೂಮಿಯನ್ನು ಸಡಿಲ ಮಾಡಿಕೊಂಡು ಆಮೇಲೆ ಆಳುಗಳನ್ನು ಕರೆಸುತ್ತೇವೆ ಕೆಲವು ಕಡೆ ಕೃಷಿ ಹೊಂಡ ಅಂಥವೆಲ್ಲ ಹೊಡೆಯಬೇಕಾದರೆ machine use ಮಾಡಲಿಕ್ಕೆ ಕೇಳಿದ್ದೆವು ಆದರೆ, ಇವತ್ತಿನವರೆವಿಗೂ permission ಕೊಡಲಿಲ್ಲ ನಮ್ಮ ತುಮಕೂರು DC ಯವರು notice ಕೊಟ್ಟು, ಇವತ್ತು ನಮ್ಮ ಎಲ್ಲ engineers ಕೆಲಸ ಮಾಡುವುದಿಲ್ಲವೆಂದು ನಮಗೆ ಮನವಿ ಕೊಟ್ಟಿದ್ದಾರೆ ಇದಕ್ಕೆ ತಾವೇನಾದರೂ ಒಂದು ನಿರ್ದಿಷ್ಟವಾದ ತೀರ್ಮಾನಕ್ಕೆ ಬರಬೇಕು ನಾವು ಇಲ್ಲಿಯೇ ನಿಂತುಕೊಂಡು ಹೇಳಿದ್ದೆವು, ಎಲ್ಲಾ ಕಡೆ ಬಳಸುತ್ತಿದ್ದಾರೆ, 6 ರೂ ಅಕ್ಕಿಯನ್ನು ತೆಗೆದುಕೊಳ್ಳುವವರೇ ದಿಕ್ಕಿಲ್ಲ, 3 ರೂ ಅಕ್ಕಿ PD system ನಲ್ಲಿ ಸಿಕ್ಕುತ್ತಿದೆ, ನಾವೇನಾದರೂ ಮಾಡಲಿಕ್ಕೆ ಅವಕಾಶ ಕೊಡಿ ಎಂದರೆ ಈವರೆಗೂ ನೀವು ಏನು ನಿಲವು ತೆಗೆದುಕೊಳ್ಳದೆ ಕೆಲಸ ಮಾಡಿರುವವರಿಗೆಲ್ಲಾ notice ಕೊಟ್ಟು ನಾವು ಹೇಳಿ ಕೆಲಸ ಮಾಡಿಸುವುದು ತಪ್ಪಿತಸ್ಥರಾಗುವಂಥ ಸ್ಥಿತಿ ನಿರ್ಮಾಣವಾಗಿದೆ ಆ ಬಗ್ಗೆ ತಾವೊಂದು ಮಾಹಿತಿ, ಹೇಳಿಕೆಯನ್ನು ಇಲ್ಲಿ ಕೊಡಬೇಕು

ಶ್ರೀ ವಾಟಾಳ್ ನಾಗರಾಜ್ JCB ಇಲ್ಲದೆ ಕೆಲಸ ಮಾಡುವುದಕ್ಕಾಗುವುದಿಲ್ಲ ವಸ್ತು ಸ್ಥಿತಿ ಇದೆ ಅದನ್ನು ಬಿಟ್ಟು ಸುಮ್ಮನೆ ಕೆಲಸ ಮಾಡಿ ಎಂದು ಹೇಳಿದರೆ ಇಡೀ